ಕರ್ನಾಟಕ ಸರ್ಕಾರ

**ತಾಂತ್ರಿಕ ಶಿಕ್ಷಣ ಇಲಾಖೆ**

ಸಂಖ್ಯೆ: ಬಿಟಿಇ/06/ಇಸಿಎಸ್(1)/2023

ಆಯುಕ್ತರವರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದೂರವಾಣಿ ಸಂಖ್ಯೆ:080-2220777
ದಿನಾಂಕ: 06.12.2023

**ಸುತ್ತೋಲೆ**

ವಿಷಯ: ಡಿಸೆಂಬರ್ 2023 ರ ಡಿಪ್ಲೋಮ ಸೆಮಿಸ್ಟರ್ ಪರೀಕ್ಷಾ ಕಾರ್ಯಗಳ ಸಂಬಂಧ ರಜಾ ಮಂಜೂರಾತಿ ಮಾಡದಿರಲು ಹಾಗೂ ಪರೀಕ್ಷಾ ಕಾರ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸುವ ಕುರಿತು.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: 06/ಇಸಿಎಸ್(1)/2023 ದಿನಾಂಕ:18.11.2023

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಿಸೆಂಬರ್ 2023 ರ ಡಿಪ್ಲೋಮ ಸೆಮಿಸ್ಟರ್ ಪ್ರಾಯೋಗಿಕ ಪರೀಕ್ಷೆಗಳು ಹಾಗೂ C-03, C-09 &C-15 ಪಠ್ಯಕ್ರಮದ ಥಿಯರಿ ಪರೀಕ್ಷೆಗಳು (Online QP) **ದಿನಾಂಕ:11.12.2023 ರಿಂದ** ಹಾಗೂ C-20 ಪಠ್ಯಕ್ರಮದ ಥಿಯರಿ ಪರೀಕ್ಷೆಗಳನ್ನು **ದಿನಾಂಕ: 19.12.2023** ರಿಂದ **29.12.2023** ರವರೆಗೆ ಜರುಗಿಸಲು ಕ್ರಮವಹಿಸಲಾಗಿದೆ.

ತತ್ಸಂಬಂಧಿತ ಮೌಲ್ಯಮಾಪನ ಕಾರ್ಯಗಳು ಹಾಗೂ ಮರುಮೌಲ್ಯಮಾಪನ ಕಾರ್ಯಗಳು ಸಹ ಜರುಗಲಿದ್ದು ಪರೀಕ್ಷಾ ಪ್ರಾರಂಭದ ದಿನದಿಂದ ಪರೀಕ್ಷೆಗಳು ಮುಗಿಯುವ ದಿನಗಳವರೆಗೂ ಮತ್ತು ಮೌಲ್ಯಮಾಪನ /ಮರುಮೌಲ್ಯಮಾಪನಗಳ ಅವಧಿಗಳಲ್ಲಿ ಪ್ರಾಂಶುಪಾಲರು ಸ್ವತಃ ಸಾಂದರ್ಭಿಕ/ಪರಿವರ್ತಿತ/ಗಳಿಕೆ ರಜೆ ಸೇರಿದಂತೆ ಯಾವುದೇ ರಜೆ ಪಡೆಯದಂತೆ ಹಾಗೂ ಬೋಧಕ/ ಬೋಧಕೇತರ ಸಿಬ್ಬಂದಿಯವರಿಗೆ ಸದರಿ ರಜೆಗಳನ್ನು ಮಂಜೂರು ಮಾಡಬಾರದೆಂದು, ತುರ್ತು ಸಂದರ್ಭಗಳಲ್ಲಿ ಮಾತ್ರ ನಿರ್ದೇಶಕರ ಪೂರ್ವಾನುಮತಿ ಪಡೆದು ಕ್ರಮಕೈಗೊಳ್ಳಲು ಉಲ್ಲೇಖದ ಈ ಕಛೇರಿ ಸುತ್ತೋಲೆಯಲ್ಲಿ ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ತಿಳಿಸಲಾಗಿತ್ತು.

ಪರೀಕ್ಷಾ ಕಾರ್ಯಗಳಿಗೆ ನಿಯೋಜಿಸಲ್ಪಟ್ಟ ಎಲ್ಲಾ ಅಧಿಕಾರಿಗಳು/ಉಪನ್ಯಾಸಕರು/ಸಿಬ್ಬಂದಿಯವರು ಕಡ್ಡಾಯವಾಗಿ ಕರ್ತವ್ಯ ನಿರ್ವಹಿಸತಕ್ಕದ್ದು. ಸದರಿ ಪರೀಕ್ಷಾ ಕಾರ್ಯಗಳ ಬದಲಾವಣೆ/ವಿನಾಯಿತಿ ಇತ್ಯಾದಿಗಳನ್ನು ಕೋರಿ ಕಾರ್ಯದರ್ಶಿಯವರನ್ನು ಖುದ್ದಾಗಿ/ದೂರವಾಣಿ ಮೂಲಕವಾಗಲಿ ಸಂಪರ್ಕಿಸಬಾರದೆಂದು ತುರ್ತು ಸಂದರ್ಭಗಳಲ್ಲಿ ಮಾತ್ರ ಸಂಸ್ಥೆಯ ಪ್ರಾಚಾರ್ಯರಿಂದ ದೃಢೀಕರಿಸಲಾದ ಮನವಿಗಳನ್ನು ಮಾತ್ರ ಮಂಡಳಿಗೆ ಸಲ್ಲಿಸಲು ತಿಳಿಸಲಾಗಿತ್ತು. ಆದಾಗ್ಯೂ ಸದರಿ ಸೂಚನೆಗಳನ್ನು ಪಾಲಿಸದೆ ಪರೀಕ್ಷಾ ಕಾರ್ಯಗಳಿಗೆ ನಿಯೋಜಿತ ಉಪನ್ಯಾಸಕರು/ ಸಿಬ್ಬಂದಿಯವರು ಪರೀಕ್ಷಾ ಕೆಲಸಗಳಿಂದ ವಿನಾಯಿತಿ / ರಜಾ ಕೋರಿ ನೇರವಾಗಿ ಮಂಡಳಿಯನ್ನು ಸಂಪರ್ಕಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಅಲ್ಲದೇ ಕೆಲವು ಸಂಸ್ಥೆಗಳ ಪ್ರಾಂಶುಪಾಲರುಗಳು ಮಂಡಳಿಯ ಪೂರ್ವಾನುಮತಿ ಪಡೆಯದೆ ಉಪನ್ಯಾಸಕರು/ ಸಿಬ್ಬಂದಿಯವರಿಗೆ ರಜೆ ಮಂಜೂರು ಮಾಡಿ ಬಿಟಿಇ ಲಿಂಕ್ಸ್ ನಲ್ಲಿ ರಜೆ ಎಂದು ಅಪ್‌ಲೋಡ್ ಮಾಡಿರುವುದು ಸಹ ಕಂಡುಬಂದಿದ್ದು, ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ತೊಂದರೆಯುಂಟಾಗಿರುವ ಕಾರಣ ಸದರಿ ಸಂಸ್ಥೆಗಳ ಪ್ರಿನ್ಸಿಪಾಲರುಗಳು ಈ ಕೂಡಲೇ ರಜೆ ಮಂಜೂರು ಮಾಡಿರುವ ಉಪನ್ಯಾಸಕರ/ ಸಿಬ್ಬಂದಿಯವರ ಪಟ್ಟಿಯೊಂದಿಗೆ ಲಿಖಿತ ವಿವರಣೆ ನೀಡಲು ಸೂಚಿಸಲಾಗಿದೆ.

ಕಾರ್ಯದರ್ಶಿ

6/12/23

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ, ಖಾಸಗಿ ಅನುದಾನಿತ & ಖಾಸಗಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ
– ಮಾಹಿತಿ ಮತ್ತು ಮುಂದಿನ ಕ್ರಮಕ್ಕಾಗಿ

ಪ್ರತಿ:
1. ಕಂಪ್ಯೂಟರ್ ವಿಭಾಗಕ್ಕೆ – ಬಿಟಿಇ ಲಿಂಕ್ಸ್ ವೆಬ್‌ಪೋರ್ಟಲ್‌ನಲ್ಲಿ ಪ್ರಕಟಿಸಲು
2. ಇ-ಗವರ್ನೆನ್ಸ್ ವಿಭಾಗ –ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಮಾನ್ಯ ಆಯುಕ್ತರವರ ಆಪ್ತ ಶಾಖೆ
4. ನಿರ್ದೇಶಕರ ಆಪ್ತ ಶಾಖೆ
5. ಕಾರ್ಯದರ್ಶಿಯವರ ಆಪ್ತಶಾಖೆ